**ಗ್ರಾಮ ಪಂಚಾಯತ್‌ಗಳಿಗೆ ಆಡಳಿತ ಸಮಿತಿ ನೇಮಕ: ಕಾನೂನಿನ ಗೋಡೆಗೆ ಕನ್ನ ಕೊರೆಯುವ ಪ್ರಯತ್ನದಲ್ಲಿ ರಾಜ್ಯ ಸರ್ಕಾರ**

ಗ್ರಾಮ ಪಂಚಾಯತ್‌ಗಳಿಗೆ ಆಡಳಿತ ಸಮಿತಿ ನೇಮಕ ವಿಚಾರದಲ್ಲಿ ಸರ್ಕಾರ ತಪ್ಪು ಮಾಡಿಲ್ಲ, ಎಲ್ಲಾ ಪ್ರಕ್ರಿಯೆ ಕಾನೂನುಬದ್ಧವಾಗಿದೆ. *ಅಡ್ವೋಕೇಟ್ ಜನರಲ್ ಜತೆ ಚರ್ಚಿಸಿ ಸೆಕ್ಷನ್ 321ರ ಪ್ರಕಾರ ಆಡಳಿತಾಧಿಕಾರಿ ನೇಮಕ ಸಾಧ್ಯ ಎಂದು ಅಭಿಪ್ರಾಯ ಲಭಿಸಿದ ಬಳಿಕ ಸಂಪುಟದ ಒಪ್ಪಿಗೆ ಪಡೆಯಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಮಾನ್ಯ ಕೆ.ಎಸ್.ಈಶ್ವರಪ್ಪನವರು ಮಾಧ್ಯಮಗಳಿಗೆ ನೀಡಿದ ಹೇಳಿಕೆಯು, ಕಾಯಿದೆಯ ಈ ಪ್ರಕರಣದ ಆಳ-ಅಗಲ-ವೈಶಾಲ್ಯತೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಕ್ಕೆ ನಮ್ಮನ್ನು ದೂಡಿತು.*

*ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 321 ಹೇಳುವುದೇನೆಂದರೆ, **'ಈ ಅಧಿನಿಯಮವನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ ಸರ್ಕಾರವು ಸಂದರ್ಭವು ಅಗತ್ಯಪಡಿಸಬಹುದಾದಂಥ, ತೊಂದರೆಯನ್ನು** ನಿವಾರಿಸಲು **ಅಗತ್ಯವೆಂದು ಕಂಡುಬರುವಂಥ ಏನನ್ನಾದರೂ, ರಾಜ್ಯಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಮಾಡಬಹುದು.** (If any difficulty arises in giving effect to the provisions of this Act, the Government may by order, published in the Official Gazette as the occasion may require do anything which appears to it to be necessary to remove the difficulty)'*

ಈ ನಿಬಂಧನೆಯು ಇಂಗ್ಲಿಷ್ ಪದ **'If'** any difficulties arises (ಕನ್ನಡದಲ್ಲಿ – ಉದ್ಭವಿಸಿದಲ್ಲಿ) ಎಂಬ ಅರ್ಥದಿಂದ ಪ್ರಾರಂಭವಾಗುತ್ತದೆ. ಇದರಿಂದಾಗಿ ಈ ನಿಬಂಧನೆಯು ಕೆಲವು ಅಸಾಮಾನ್ಯ ಸಂದರ್ಭಗಳಲ್ಲಿ ಮಾತ್ರ ಅನ್ವಯವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಈ ಪ್ರಕರಣವು ***'ಈ ಅಧಿನಿಯಮವನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ** (in giving effect to the provisions of this Act)'* ಎಂಬುದನ್ನು ಸ್ಪಷ್ಟೀಕರಿಸಿದೆ. ಅಂದರೆ **ಇದೇ ಕಾಯಿದೆಯನ್ನು** ಜಾರಿಗೆ ತರುವಾಗ **ಮಾತ್ರ** ಯಾವುದಾದರೂ ತೊಂದರೆ ಉದ್ಭವಿಸಿದಾಗ ಈ ಪ್ರಕರಣವನ್ನು ಬಳಸಲು ಸಾಧ್ಯ ಎಂದರ್ಥ. ಇಂಗ್ಲಿಷ್‌ನಲ್ಲಿ ಹೇಳಿರುವಂತೆ, **ಈ ಕಾಯಿದೆಯ ನಿಬಂಧನೆಗಳನ್ನು ಜಾರಿಗೊಳಿಸುವಲ್ಲಿ ಪ್ರಭಾವ** ಬೀರುವುದು ಎನ್ನುವುದು **ಈ ಕಾಯಿದೆಯ ಸನ್ನಿವೇಶದಲ್ಲಿ ಮಾತ್ರ ಸಂಬಂಧಿಸಿದ್ದೇ ಹೊರತೂ ಬೇರೆ ಯಾವುದೋ ಸೀಮಿತ ಪರಿಸ್ಥಿತಿಗೆ ಯಾವುದೇ ಸರ್ಕಾರ ರೂಪಿಸಿದ ಕಾನೂನು, ನಿಯಮ, ಅಧ್ಯಾದೇಶ** ಅಥವಾ ಸಂದರ್ಭಕ್ಕೆ **ಅನುಗುಣವಾಗಿ** ಈ ಕಾನೂನಿನ ವಸ್ತುಸ್ವರೂಪವನ್ನು ಬದಲಾಯಿಸುವಂತಹ ಆದೇಶವನ್ನು ನೀಡಲು 321ನೇ ಪ್ರಕರಣದ **ಬಳಕೆ ಸಾಧ್ಯವಿಲ್ಲ.**

ಅಲ್ಲದೇ ಈ ಪ್ರಕರಣವು *'ರಾಜ್ಯಪತ್ರದಲ್ಲಿ ಪ್ರಕಟಿಸುವ **ಆದೇಶದ ಮೂಲಕ** ಮಾಡಬಹುದು' ಎಂಬುದನ್ನೂ ಸಹ ಒತ್ತಿ ಹೇಳುತ್ತದೆ. ಇಲ್ಲಿ **'ಆದೇಶ'** ಪದದ ಪ್ರಜ್ಞಾಪೂರ್ವಕ ಬಳಕೆಯಿದೆ. ಯಾಕೆಂದರೆ* ಯಾವುದೇ ಆದೇಶಗಳು ಆ ಕಾನೂನಿನ ಮೂಲಸ್ವರೂಪಕ್ಕೆ ಅನುಗುಣವಾಗಿ ಇರಬೇಕೇ ವಿನಃ ಕಾನೂನಿನ ಚೌಕಟ್ಟನ್ನು ಮೀರಿ, ಅದರ ವಸ್ತುಸ್ವರೂಪವನ್ನೇ ಬದಲಾಯಿಸುವಂತೆ ಮಾಡಲು ಅವಕಾಶವಿಲ್ಲ. ಹೀಗೆ ಮಾಡಿದ ಆದೇಶಗಳು ಕಾನೂನಿನ ಉಲ್ಲಂಘನೆ ಎಂದೇ ಪರಿಗಣಿಸಲ್ಪಡುತ್ತವೆ. **ಈ 'ಆದೇಶ' ಪದಬಳಕೆಯು ಸರ್ಕಾರಕ್ಕೆ ವಹಿಸಲಾಗಿರುವ ಅಧಿಕಾರದ ವ್ಯಾಪ್ತಿಯನ್ನು ನಿರ್ಬಂಧಿಸುತ್ತದೆ.** ಅಲ್ಲದೇ, ತ್ವರಿತ ಸನ್ನಿವೇಶದಲ್ಲಿ ಮಾತ್ರ, ಅಧಿಕಾರದ **ಉಪ–ನಿಯೋಗವನ್ನು** ಸ್ಪಷ್ಟವಾಗಿ ಸೂಚಿಸುತ್ತದೆ. ಈ **ಪ್ರಕರಣದ ಬಳಕೆಯ ನಿರ್ಬಂಧವನ್ನು ಸ್ಪಷ್ಟ ಪಡಿಸಲೆಂದೇ 'ಆದೇಶ' ಪದದ ಬಳಕೆಯನ್ನು** ಇಲ್ಲಿ ಮಾಡಲಾಗಿದೆ. ಹೀಗಾಗಿ ಯಾವುದೇ ಸರ್ಕಾರಕ್ಕೆ ಅಥವಾ ಸಚಿವ ಸಂಪುಟಕ್ಕೆ ಕಾಯಿದೆಯ ಈ 321ನೇ ಪ್ರಕರಣವನ್ನು ಬಳಸಿ ಕಾಯಿದೆಯ ಮೂಲಸ್ವರೂಪವನ್ನೇ ಬದಲಾಯಿಸುವ ಆದೇಶವನ್ನು ಹೊರಡಿಸುವ ಅಧಿಕಾರವೇ ಇಲ್ಲ. **ಕಲ್ಲನ್ನು ಕೆತ್ತನೆ ಮಾಡಿ ಅದಕ್ಕೊಂದು ಸುಂದರ ರೂಪಕೊಡಲು ಉಳಿ ಎಂಬ ಅಸ್ತ್ರವನ್ನು ಶಿಲ್ಪಿಗೆ ನೀಡುವುದೇ ವಿನಃ ವಿಕಾರಗೊಳಿಸಲು ಅಲ್ಲ; ವಿಕಾರಗೊಳಿಸುವವರನ್ನು ವಿಧ್ವಂಸಕರೆನ್ನುತ್ತಾರೆಯೇ ವಿನಃ ಶಿಲ್ಪಿಯಲ್ಲ.**

ಸಾಮಾನ್ಯವಾಗಿ ಎಲ್ಲಾ ಶಾಸನ/ಕಾಯಿದೆಗಳಲ್ಲಿ ಈ ಪ್ರಕರಣವನ್ನು ಉಲ್ಲೇಖಿಸಿರುತ್ತಾರೆ. ಅದಕ್ಕೆ ಕಾರಣವೆಂದರೆ, ಸಂಬಂಧಿತ ಕಾಯಿದೆಯು ಶಾಸನದ ಪದಗಳಲ್ಲಿನ ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ, ಪ್ರಾಯೋಗಿಕ ತೊಂದರೆಗಳಿಂದಾಗಿ, ಯಾವುದೇ ಕಾಯಿದೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದೇ ಇರುವ ಸಂದರ್ಭದಲ್ಲಿ, ಆ ದೋಷಗಳನ್ನು ನಿವಾರಿಸಿಕೊಳ್ಳಲು ಅಗತ್ಯವಿರುವ ಚಿಕ್ಕ–ಪುಟ್ಟ ಬದಲಾವಣೆಗಳೊಂದಿಗೆ ಕಾಯಿದೆಯು ಸಂಪೂರ್ಣ ಬಲ ಹಾಗೂ ಚೈತನ್ಯದಿಂದ ಪರಿಣಾಮಕಾರಿಯಾಗಿ ಅನುಷ್ಠಾನವಾಗುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಲೆಂದು ನೀಡಿರುವ ಅವಕಾಶವೇ ಈ ಪ್ರಕರಣವಾಗಿದೆ.

**ಆದರೆ, ಸರ್ಕಾರಕ್ಕೆ** ನಿಗದಿತ ಅವಧಿಗೆ, ಸೀಮಿತ ಅಧಿಕಾರ ನೀಡಿ ಉಲ್ಲೇಖಿಸಿರುವ ಈ **321ನೇ ಪ್ರಕರಣವನ್ನು ನಮ್ಮ ರಾಜ್ಯ ಸರ್ಕಾರವು ಕೈಗೆ ಸಿಕ್ಕಿದ 'ಖಾಲಿ ಚೆಕ್'ನಂತೆ ಬಳಸಿಕೊಂಡು ತನ್ನ ಉದ್ದೇಶ ಪೂರೈಕೆಗೆ ಅಗತ್ಯವಿರುವಷ್ಟು 'ಅಧಿಕಾರ'ವನ್ನು ಬರೆದುಕೊಳ್ಳುವ ಸಲುವಾಗಿ ಬ್ರಹ್ಮಾಸ್ತ್ರವಾಗಿಸಿಕೊಳ್ಳಲು ಸಾಧ್ಯವಿಲ್ಲ.**

**ನಮ್ಮ ಮಾನ್ಯ ಸಚಿವರಾದ** ಕೆ.ಎಸ್. ಈಶ್ವರಪ್ಪನವರು *"ಕೊರೋನಾ ಸಮಯದಲ್ಲಿ **ಹೊಸ ಸಮಿತಿ ಒಳ್ಳೆಯ ಕೆಲಸ ಮಾಡಿದರೆ ತಮ್ಮ ಕೈಯಲ್ಲಿರುವ ಕೆಲವು ಗ್ರಾಮ ಪಂಚಾಯತ್‌ಗಳು ಕಿತ್ತುಕೊಂಡು ಹೋಗಬಹುದು ಎಂಬ ಭಯದಿಂದ ವಿರೋಧ ಪಕ್ಷ ಸರ್ಕಾರದ ಕ್ರಮಕ್ಕೆ ವಿರೋಧ ವ್ಯಕ್ತಪಡಿಸುತ್ತಿದೆ** (19–05–2020ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದಂತೆ)"* ಎಂಬ ಹೇಳಿಕೆ ನೀಡುತ್ತಾರೆ. ಮಾನ್ಯ ಸಚಿವರಾದ ಎಸ್.ಟಿ.ಸೋಮಶೇಖರ್ ಅವರು ನೀಡಿದ ಹೇಳಿಕೆಯಂತೆ *(24–05–2020ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದಂತೆ), **'ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಪಕ್ಷ ಹಾಗೂ ಚಿಹ್ನೆಗಳಿಲ್ಲ. ಹಾಗಾಗಿ ಬಿಜೆಪಿಯ ಚಿಹ್ನೆಯಲ್ಲಿ ಚುನಾವಣೆ ನಡೆಸಲು ಸಾಧ್ಯವಿಲ್ಲ. ಸರ್ಕಾರ ಮುಂದಿನ ದಿನಗಳಲ್ಲಿ ಸ್ಥಳೀಯ ಶಾಸಕರನ್ನು***

*ವಿಶ್ವಾಸಕ್ಕೆ ತೆಗೆದುಕೊಂಡು ನಾಮನಿರ್ದೇಶನ ಸದಸ್ಯರ ನೇಮಕ ಮಾಡಲಿದೆ. ಇದರ ಬಗ್ಗೆ ಗೊಂದಲವಿಲ್ಲ. ಬೇರೆ ಪಕ್ಷದವರು ಅಧಿಕಾರದಲ್ಲಿ ಇದ್ದರೆ, ನಮ್ಮ ಪಕ್ಷದವರನ್ನು ಮಾಡುತ್ತಾರೆಯೇ?'*

**ಆದರೆ, ಗ್ರಾಮ ಪಂಚಾಯತ್ ಚುನಾವಣೆಯು ಯಾವುದೇ ಪಕ್ಷದ ಚಿಹ್ನೆಯನ್ನು ಆಧರಿಸಿ ನಡೆಯುವ ಚುನಾವಣೆಯಲ್ಲ, ಪಕ್ಷಾತೀತ ನೆಲೆಯಲ್ಲಿ ನಡೆಯುವ ಈ ಚುನಾವಣೆಗಳ** ಬಗ್ಗೆ ಸರ್ಕಾರದ ತಪ್ಪು ನಿರ್ಧಾರವನ್ನು ಹಲವಾರು ಸಂಘ–ಸಂಸ್ಥೆಗಳು, ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರು ಒಕ್ಕೊರಲಿನಿಂದ ವಿರೋಧಿಸುತ್ತಿರುವಾಗ, ನಮ್ಮ ರಾಜ್ಯ ಸರ್ಕಾರದ ಪ್ರತಿನಿಧಿಗಳಾದ ಸಚಿವರು ನೀಡುತ್ತಿರುವ ಇಂತಹ **ಹೇಳಿಕೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕು? ಗ್ರಾಮ ಪಂಚಾಯತ್‌ನಲ್ಲಿ ಪಕ್ಷ ರಾಜಕೀಯ ನಡೆಸುವ ಹುನ್ನಾರದಿಂದಲೇ ಕಾನೂನಿಗೇ ಕನ್ನ ಕೊರೆದಾದರೂ ಆಡಳಿತ ಸಮಿತಿ ರಚನೆಗೆ ನಮ್ಮ ರಾಜ್ಯ ಸರ್ಕಾರ ಮುಂದಾಗುತ್ತಿದೆ ಎಂಬುದು ಸ್ಪಷ್ಟವಾಗುವುದಿಲ್ಲವೇ?**

**ದೇಶದ ಸಂವಿಧಾನವು ಯಾವುದೇ ಹಂತದ ಸರ್ಕಾರವು ರೂಪಿಸುವ ಕಾನೂನು, ನಿಯಮ, ಅಧಿಸೂಚನೆ, ಅಧ್ಯಾದೇಶ, ಆದೇಶ, ಸುತ್ತೋಲೆಗಿಂತ ಉತ್ಕೃಷ್ಟವಾದುದು. ಅದನ್ನೇ ಉಲ್ಲಂಘಿಸಿ ಮಾಡಿದ ಯಾವುದೇ ಆದೇಶ, ಅಧ್ಯಾದೇಶ ಹಾಗೂ ಕಾನೂನುಗಳು ಸಂವಿಧಾನಬಾಹಿರವೆಂದೇ ಪರಿಗಣಿಸಲ್ಪಡುತ್ತವೆ ಎಂಬುದು ಗ್ರಾಮ ಸ್ವರಾಜ್ ಕಾಯಿದೆಯ 321ನೇ ಪ್ರಕರಣದ ದುರ್ಬಳಕೆ ಮಾಡುವ ಪ್ರಯತ್ನಕ್ಕೆ ಕೈಹಾಕಿರುವ ರಾಜ್ಯ ಸರ್ಕಾರಕ್ಕೆ ಗೊತ್ತಿಲ್ಲವೇ? ಅಥವಾ ಶತಾಯಗತಾಯವಾಗಿ ಪ್ರಯತ್ನಿಸಿಯಾದರೂ ಅಧಿಕಾರವನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳುವ ದುರಾಸೆಯೇ ಈ ಪ್ರಯತ್ನಕ್ಕೆ ಕಾರಣವೇ ಎಂಬ ಜಿಜ್ಞಾಸೆ ಒಡಮೂಡುತ್ತಿದೆ.**

ಸಂವಿಧಾನದ 243ಇ ಹಾಗೂ 243ಕೆ ವಿಧಿಗಳ ಪ್ರಕಾರ **ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು** ಚುನಾವಣೆಗಳನ್ನು ನಡೆಸುವ ಅಧಿಕಾರ ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿದ್ದರೂ, **ತನ್ನದೇ ಆದ ಅಜೆಂಡಾವನ್ನು ಸಮರ್ಥಿಸಿಕೊಳ್ಳಲು ರಾಜ್ಯ ಸರ್ಕಾರ ಕಾನೂನಿನ ಪ್ರಕರಣವನ್ನು ದುರುಪಯೋಗಪಡಿಸಿಕೊಳ್ಳುವ ದುಸ್ಸಾಹಸ ಮಾಡುತ್ತಿದ್ದರೂ, ರಾಜ್ಯ ಚುನಾವಣಾ ಆಯೋಗ ಸುಮ್ಮನಿದ್ದು, ಇನ್ನು ಅಧಿಕಾರಾವಧಿ ಮುಗಿಯಲು ಕೇವಲ 15 ದಿನಗಳಷ್ಟೇ ಇರುವಾಗ, ಹಠಾತ್ತನೆ ಮೂರು ದಿನಗಳ ಹಿಂದೆ ಜಿಲ್ಲಾಧಿಕಾರಿಗಳಿಗೆ ಅಭಿಪ್ರಾಯ ಕೇಳಿ ಪತ್ರ ಬರೆದಿರುವುದು ಅದರ ಸ್ವಾಯತ್ತತೆಯನ್ನೇ ಪ್ರಶ್ನಿಸುವಂತಾಗಿದೆ.**

ಕೊರೋನಾ ಪರಿಸ್ಥಿತಿಯನ್ನು ನಿಭಾಯಿಸಲು ಯಾವುದೇ ಹಂತದ ಸರ್ಕಾರ ರೂಪಿಸಿದ ನಿಯಮಾವಳಿ, ನಿರ್ದೇಶನ ಹಾಗೂ ಅಧ್ಯಾದೇಶಗಳಲ್ಲಿ ಕೆಲವು ನಿರ್ಬಂಧಗಳಿವೆಯೇ ವಿನಃ ದೈನಂದಿನ ಚಟುವಟಿಕೆಗಳಿಗೆ, ಕಛೇರಿಯ ಕೆಲಸ ಕಾರ್ಯಗಳಿಗೆ ಇದು ಯಾವುದೇ ತೊಂದರೆಯನ್ನು ಉಂಟುಮಾಡುವುದಿಲ್ಲ ಎಂದು ರಾಜ್ಯ ಸರ್ಕಾರವೇ ಹೇಳಿದೆ. ಸಾಮಾಜಿಕ ಅಂತರ, ಸಮಯ ನಿರ್ಬಂಧನೆ ಮುಂತಾದ ಅಗತ್ಯ ನಿಯಮಗಳನ್ನು ಚುನಾವಣಾ ನೀತಿ ಸಂಹಿತೆಯಲ್ಲಿ ಅಳವಡಿಸಿಕೊಂಡು ಚುನಾವಣೆ ನಡೆಸಲು ಹಲವಾರು ಸಾಧ್ಯತೆಗಳಿವೆ. ಅಲ್ಲದೇ, ಈಗಾಗಲೇ ಜನಾದೇಶವಿರುವ ಸ್ಥಳೀಯ ಸರ್ಕಾರದ ಪ್ರತಿನಿಧಿಗಳು ಕೇಳುತ್ತಿರುವಂತೆ ಪ್ರಸ್ತುತ ಇರುವ ಸ್ಥಳೀಯ ಸರ್ಕಾರವನ್ನೇ ಮಧ್ಯಂತರ ಸರ್ಕಾರವಾಗಿ ಮುಂದುವರಿಸುವ ನಿರ್ಧಾರವನ್ನು ಸರ್ಕಾರ ಕೈಗೊಂಡರೂ, ಕೊರೋನಾ ಸಂದರ್ಭಕ್ಕೆ ರೂಪಿಸಿದ ನಿಯಮಾವಳಿಗಳನ್ನುನ ಕಾರ್ಯಗತಗೊಳಿಸಲು ಯಾವುದೇ ತೊಂದರೆಯಾಗುವುದಿಲ್ಲ. ಹೀಗೆಲ್ಲಾ ಇರುವಾಗ, ಇರುವ ಅವಕಾಶಗಳನ್ನೆಲ್ಲಾ ಕಡೆಗಣಿಸಿ, **ಜನಾದೇಶವಿರದ, ನಾಮನಿರ್ದೇಶನ ಮಾಡುವ ಆಡಳಿತ ಸಮಿತಿ ನೇಮಕಕ್ಕೆ** ನಮ್ಮ ರಾಜ್ಯ ಸರ್ಕಾರ ಪಟ್ಟುಹಿಡಿದು ಹಾತೊರೆಯುತ್ತಿರುವುದು ಮಾರ್ಮಿಕವಾಗಿದೆ.

ಕೃಪಾ ಎಂ.ಎಂ.
ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ
ಹಾಗೂ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕಾರ್ಯಕರ್ತರು

Mobile No: 99453 75430
Email: mm.kripa@gmail.com

